**ಕರ್ನಾಟಕ ವಿಧಾನ ಪರಿಷತ್ತು**

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 962
2. ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್.
3. ಉತ್ತರಿಸುವ ದಿನಾಂಕ : 13/12/2023
4. ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿನ ಕೃಷಿಕ ಸಮಾಜದಿಂದ ಸರ್ಕಾರಕ್ಕೆ ಬರಬೇಕಾದ ನೆಲಬಾಡಿಗೆಯ ಬಾಕಿ ಹಣ ಎಷ್ಟು; ಇತ್ತೀಚೆಗೆ ಪತ್ರಿಕೆಯಲ್ಲಿ ಬಂದಿರುವ ವಿವರವಾದ ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೈಸೂರು ಪ್ರದೇಶ ಕೃಷಿಕ ಸಮಾಜ (ರೈತರ ಒಕ್ಕೂಟ, ಮೈಸೂರು) ಇವರಿಗೆ ಸರ್ಕಾರದ ಆದೇಶ ಸಂಖ್ಯೆ:ಲೋಇ 93 ಬಿಒಕ್ಯೂ 1964, ದಿ:12.04.1966ರಲ್ಲಿ ಮತ್ತು ದಿ:02.11.1987ರ ಪೂರಕ ಒಪ್ಪಂದದಂತೆ ನೀಡಲಾಗಿದ್ದು, 60258 ಚದರ ಅಡಿ ವಿಸ್ತೀರ್ಣದ ಪೈಕಿ 6930 ಚದರ ಅಡಿಯನ್ನು ರಸ್ತೆ ಅಗಲೀಕರಣಕ್ಕಾಗಿ ಬಿಟ್ಟಿರುವುದರಿಂದ ಉಳಿಕೆ 53328 ಚದರ ಅಡಿ ವಿಸ್ತೀರ್ಣವನ್ನು ದಿನಾಂಕ:12.04.1966 ರಿಂದ 11.04.2065 ರವರೆಗೆ ವಾರ್ಷಿಕ ರೂ. 1000 ಗಳಂತೆ ಪ್ರತಿ 5 ವರ್ಷಕ್ಕೊಮ್ಮೆ ಬಾಡಿಗೆ ಪರಿಷ್ಕರಿಸುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು 99 ವರ್ಷಗಳಿಗೆ ಲೀಸ್/ ಗುತ್ತಿಗೆ ನೀಡಲಾಗಿರುತ್ತದೆ.<br><br>ಸದರಿ ಪೂರಕ ಕರಾರಿನನ್ವಯ ವಿಸ್ತೀರ್ಣವು 53328 ಚದರ ಅಡಿಗಳಿದ್ದು, ಸದರಿ ವಿಸ್ತೀರ್ಣಕ್ಕೆ ಹಿರಿಯ ಉಪ ನೋಂದಣಾಧಿಕಾರಿಗಳು, ಗಾಂಧಿನಗರ ಉಪನೋಂದಣಿ ಕಛೇರಿ, ಬೆಂಗಳೂರು ಇವರು ಧೃಢೀಕರಿಸಿ ನೀಡಿರುವ ಮಾರ್ಗಸೂಚಿ ಬೆಲೆಪಟ್ಟಿಯನ್ವಯ ದಿನಾಂಕ :20.01.1997 ರಿಂದ 28.02.2023 ರವರೆಗೆ ನೆಲಬಾಡಿಗೆಯ ಬಾಕಿ ಹಣ ರೂ.129,01,92,005 ಗಳನ್ನು ನಿಗಧಿಪಡಿಸಿದ್ದು, ರೂ.129,01,92,005 ಗಳಷ್ಟು ಮೈಸೂರು ಪ್ರದೇಶ ಕೃಷಿಕ ಸಮಾಜ (ರೈತರ ಒಕ್ಕೂಟ, ಮೈಸೂರು) ಇವರು ಪಾವತಿಸಬೇಕಾಗಿರುತ್ತದೆ. |
| ಆ) | ಈ ರೀತಿ ಸರ್ಕಾರದಿಂದ ಪಡೆದ ಸ್ಥಳವನ್ನು ಕೃಷಿಕ ಸಮಾಜದವರು ಬೇರೆ ಬೇರೆ ಖಾಸಗಿಯವರಿಗೆ ಉಪಗುತ್ತಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದ್ದಲ್ಲಿ, ನಿಯಮ ಬಾಹಿರವಾಗಿ ಖಾಸಗಿಯವರಿಗೆ ಉಪ ಗುತ್ತಿಗೆ ನೀಡುತ್ತಿರುವ ಸಂಬಂಧ ಯಾವ ಕ್ರಮ ಕೈಗೊಳ್ಳಲಾಗುವುದು; | ಕೃಷಿಕ ಸಮಾಜದವರು ಬೇರೆ ಬೇರೆ ಖಾಸಗಿಯವರಿಗೆ ಉಪಗುತ್ತಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕರ್ನಾಟಕ ಪ್ರದೇಶ ಕೃಷಿಕ ಸಮಾಜದವರು ನಿರ್ಮಿಸಿರುವ ಕಟ್ಟಡದಲ್ಲಿ ಉಪ ಬಾಡಿಗೆ ನೀಡಿರುವುದು ಮೂಲ ಕರಾರಿನ ಷರತ್ತುಗಳ ಉಲ್ಲಂಘನೆಯಾಗಿರುತ್ತದೆ.<br><br>ಕೃಷಿಕ ಸಮಾಜದವರು ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದರಿಂದ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಕಾನೂನು ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ. ಕಾನೂನು ಇಲಾಖೆಯು ಪೂರಕ ಮಾಹಿತಿಯನ್ನು ಒದಗಿಸುವಂತೆ ಕೋರಿದ್ದು, ಮಾಹಿತಿಯನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ.<br><br>ಕಾನೂನು ಇಲಾಖೆಯವರು ನೀಡುವ ಅಭಿಪ್ರಾಯದಂತೆ ಮುಂದಿನ ಕ್ರಮ ವಹಿಸಲಾಗುವುದು. |
| ಇ) | ಈ ಸಂಬಂಧ ಮುಖ್ಯ ಕಾರ್ಯದರ್ಶಿಯವರಿಗೆ ಸಮಗ್ರ ವರದಿ ಸಲ್ಲಿಸಲಾಗಿರುವುದು ನಿಜವೇ; ಹೌದಾದ್ದಲ್ಲಿ, ಗುತ್ತಿಗೆ ಕರಾರನ್ನು ರದ್ದುಪಡಿಸಲು ಸರ್ಕಾರಕ್ಕಿರುವ ತೊಂದರೆಗಳೇನು; ಯಾವಾಗ ರದ್ದುಪಡಿಸಲಾಗುವುದು? (ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು) | |

ಸಂಖ್ಯೆ: ಲೋಇ 47 ಬಿಎಲ್ ಕ್ಯೂ 2023

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು.